**ಓ ಎಸ್ ನಂಃ 264-15**
**ಪಿ ಡಬ್ಲ್ಯೂ ಃ 1**

**ದಿಃ 28-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಲ್ ಪಿ ಎಸ್ ವಕೀಲರಿಂದ**

25. ನನ್ನ ಅಣ್ಣ ವೆಂಕಟೇಶಯ್ಯ ವೈದ್ಯಕೀಯ ಓದಿರುತ್ತಾರೆ. ಅವರು ಯಾವ ವರ್ಷದಲ್ಲಿ ತಮ್ಮ ಓದನ್ನು ಮುಗಿಸಿರುತ್ತಾರೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಾನು ಸಂಪಾದನೆ ಮಾಡಿದ ಆಸ್ತಿಗಳು ಬೆಳಗುಂಬ ಗ್ರಾಮದ ಸರ್ವೆ ನಂ 44 ಆಸ್ತಿಯಾಗಿರುತ್ತದೆ. ನನ್ನ ತಂದೆಯ ಕಾಲದಲ್ಲಿ ನಿವೇಶನವನ್ನು ಬೆಂಗಳೂರಿನಲ್ಲಿ ಖರೀದಿ ಮಾಡಿದ್ದರು. ಅದನ್ನು ಒಟ್ಟು ಕುಟುಂಬದಲ್ಲಿ ಇದ್ದಾಗ ಮಾರಿರುವುದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಆ ನಿವೇಶನವನ್ನು ಮಾರಾಟ ಮಾಡಿರುವ ಬಗ್ಗೆ ದಾಖಲೆ ಇರುವುದಿಲ್ಲ. ಬೆಳಗುಂಬ ಗ್ರಾಮದ ಸರ್ವೆ ನಂ 44 ಇನ್ನು ಇರುತ್ತದೆ. ನಾವು ಗಂಗಣ್ಣನ ಮಕ್ಕಳು ಒಟ್ಟು ಕುಟುಂಬದಲ್ಲಿ ಸಂಪಾದನೆ ಮಾಡಿ ಸರ್ವೆ ನಂ 44 ರಲ್ಲಿ 20 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇವೆ.

26. ಪ್ರತಿವಾದಿಗಳು ಸಲ್ಲಿಸಿದ ತಕರಾರಿನ ವಿಷಯ ಓದಿ ತಿಳಿದುಕೊಂಡಿದ್ದು ಆದರೆ ಈಗ ಅದು ನೆನಪಿಲ್ಲ. ದಿನಾಂಕಃ 28-04-1988 ರ ವಿಭಾಗದ ಅನ್ವಯ ಕೆಲವು ಆಸ್ತಿಗಳು ನನ್ನ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿಗೆ ಸಹ ಸದರಿ ವಿಭಾಗ ಪತ್ರದ ಅನ್ವಯ ಖಾತೆಯಾಗಿರುತ್ತದೆ ಎಂದರೆ ಅವರು ಹೇಗೆ ಖಾತೆ ಮಾಡಿಸಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ, ಅವರ ಹೆಸರಿಗೆ ಆದ ಖಾತೆಯನ್ನು ನಾನು ಪ್ರಶ್ನೆ ಮಾಡಿಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳ ಹೆಸರು ಯಾವ ಆಧಾರದ ಮೇರೆಗೆ ಬದಲಾವಣೆ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ದಿನಾಂಕಃ 28-04-1988 ರ ಅನ್ವಯ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿದ್ದು ಅದು ನನಗೆ ಗೊತ್ತಿರುತ್ತದೆ ಆದ ಕಾರಣ ಅವರ ಹೆಸರಿಗೆ ಆದ ಖಾತೆಗಳನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೂ ಸಹ ಸದರಿ ವಿಭಾಗ ಪತ್ರದ ಅನ್ವಯ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ.

27. ನಾವು ಸ್ವಾಧೀನತೆಯಲ್ಲಿರುವ ಜಮೀನು ಊರಿನ ಪಕ್ಕದಲ್ಲಿರುವ ಜಮೀನು ಅಂದರೆ ಜಮೀನುಗಳು ಎಲ್ಲಾ ಕಡೆ ಇವೆ ಎಂದು ಹೇಳುತ್ತಾರೆ. ಎಲ್ಲಾ ಜಮೀನುಗಳು ಊರಿಗೆ ಹೊಂದಿಕೊಂಡು ಇರುತ್ತವೆ. ನಾವು ಸ್ವಾಧೀನತೆಯಲ್ಲಿರುವ ಜಮೀನುಗಳು ಮತ್ತು ನನ್ನ ತಂದೆಯ ಹೆಸರಿಗೆ ಖಾತೆಯಾದ ಜಮೀನುಗಳು ಫಲವತ್ತಾದ ಜಮೀನುಗಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಫಲವತ್ತಾದ ಜಮೀನನ್ನು ಭಾಗದಲ್ಲಿ ಕೊಟ್ಟಿದ್ದರಿಂದ ನನ್ನ ತಂದೆಯ ಭಾಗಕ್ಕೆ ಸ್ವಲ್ಪ ಕಡಿಮೆ ಜಮೀನನ್ನು ಕೊಟ್ಟು ಉಳಿದವರ

ಭಾಗಕ್ಕೆ ಸ್ವಲ್ಪ ಜಾಸ್ತಿ ಜಮೀನನ್ನು ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗೆ ಖಾತೆಯಾದ ಜಮೀನಿನ ಮೇಲೆ ನಾವು ಇತ್ತೀಚೆಗೆ ಸಾಲ ಪಡೆದಿರುತ್ತೇವೆ. ನಾನು ಜಮೀನಿನ ಮಾಲೀಕನಾಗಿದ್ದರೆ ಮಾತ್ರ ನನಗೆ ಸಾಲ ಸಿಗುತ್ತದೆ ಎಂದರೆ ನಿಜ. ನಾನು ನಮ್ಮ ತಂದೆಗೆ ಖಾತೆಯಾದ ಜಮೀನುಗಳ ಮಾಲೀಕನಾಗಿದ್ದರಿಂದ ನಾನು ಸಾಲ ಪಡೆದಿರುತ್ತೇನೆ ಎಂದರೆ ನನ್ನ ತಂದೆಯ ಹೆಸರಿಗೆ ಇದ್ದ ಜಮೀನುಗಳನ್ನು ಫವತಿ ಖಾತೆ ಮಾಡಿಸಿಕೊಂಡು ಸಾಲ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ಪ್ರತಿವಾದಿಗಳು ತಮ್ಮ ಹೆಸರಿಗೆ ಆದ ಖಾತೆಗಳ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಹೆಸರಿಗೆ ಆದ ಜಮೀನುಗಳ ಮೇಲೆ ಸಾಲ ಪಡೆದಿರುವ ಬಗ್ಗೆ ಪ್ರತಿವಾದಿಗಳು ತಕರಾರು ಮಾಡಿರುವುದಿಲ್ಲ ಎಂದರೆ ನಿಜ. ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ಜಮೀನುಗಳ ಮೇಲೆ ಸಾಲ ಪಡೆದಿದ್ದು ಆ ವಿಷಯ ಗೊತ್ತಿದ್ದರೂ ಸಹ ನಾನು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**